ಹಿಂದೂಸ್ತಾನ್ ಹಮಾರಾ' ಹಾಡು ಕೇಳಿ ಬಂತು; ಪ್ರಸಾರದ ಕೊನೆಗೆ 'ವಂದೇ ಮಾತರಂ' ಹಾಡು!

9 ಅಕ್ಟೋಬರ್ 1942. ತರಂಗಾಂತರ 41.42 ಮೀಟರ್ಸ್. ಭಾಷೆ: ಹಿಂದಿ. ಧ್ವನಿ: ಗಂಡು. ಸಮಯ: ರಾತ್ರಿ 8.50–9.00.

'ಭಾರತದ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಕಾರಿ ಹೋರಾಟ ಶುರುವಾಗಿ ಹತ್ತಿರ ಹತ್ತಿರ ಎರಡು ತಿಂಗಳಾಯಿತು. ಇಂಡಿಯಾದ ಮೂಲೆಮೂಲೆಗಳಲ್ಲಿ ನಡೆದಿರುವ ಘಟನೆಗಳನ್ನು ಗಮನಿಸಿ: ಪ್ರತಿಯೊಬ್ಬ ಭಾರತೀಯಳೂ, ಭಾರತೀಯನೂ ದೇಶದ ಸ್ವಾತಂತ್ರ್ಯ ಪಡೆಯಲು ತುದಿಗಾಲಲ್ಲಿ ನಿಂತಿದ್ದಾರೆ ಎಂಬುದು ಗೊತ್ತಾಗುತ್ತದೆ. ಸ್ವಾತಂತ್ರ್ಯ ಚಳುವಳಿಯನ್ನು ಹೊಸಕಿ ಹಾಕಲು ಬ್ರಿಟಿಷರು ತಮ್ಮೆಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆ. ಆದರೆ ಬ್ರಿಟಿಷರಿಗೆ ಗೊತ್ತಾಗಿದೆ– ಭಾರತೀಯರು ಬೆಚ್ಚದೆ, ಬೆದರದೆ ಸರ್ಕಾರವನ್ನು ಎದುರಿಸುತ್ತಿದ್ದಾರೆ. ಜಗ್ಗದೆ ಎದುರಾಳಿಯನ್ನು ಎದುರಿಸುತ್ತಿದ್ದಾರೆ... ಬ್ರಿಟಿಷ್ ದಬ್ಬಾಳಿಕೆಯನ್ನು ಮೂಕ ಪ್ರಾಣಿಗಳಂತೆ ಸಹಿಸಲು ಭಾರತೀಯರು ಸಿದ್ಧರಿಲ್ಲ ಎಂಬುದು ಈ ಚಳುವಳಿಯಿಂದ ಸಾಬೀತಾಗಿದೆ...

ಇಲ್ಲಿಯವರೆಗೆ ಭಾರತೀಯರು ಎಂಥ ಸ್ವಾತಂತ್ರ್ಯಕ್ಕಾಗಿ ಚಳುವಳಿಯನ್ನು ಮುನ್ನಡೆಸುತ್ತಿದ್ದರು ಗೊತ್ತೆ? ಕೋಟ್ಯಂತರ ರೈತರ, ಕಾರ್ಮಿಕರ ರಕ್ತವನ್ನು ಬಂಡವಾಳಶಾಹಿಗಳು ಇನ್ನೆಂದೂ ಹೀರಲಾಗದಂಥ ಸ್ಥಿತಿಯನ್ನು ನಿರ್ಮಾಣ ಮಾಡಲು ಈ ಚಳುವಳಿ ನಡೆಸುತ್ತಿದ್ದರು... ಇಂದಿನ ಕ್ರಾಂತಿ ಹಿಂದಿನ ಕ್ರಾಂತಿಗಳಿಗಿಂತ ಯಾಕೆ ಭಿನ್ನವಾದುದು ಎಂದರೆ, ಭಾರತೀಯರು ಅಹಿಂಸೆಯ ಅಸ್ತ್ರದ ಮೂಲಕ ತಮ್ಮ ಎದುರಾಳಿಗಳ ವಿರುದ್ಧ ಹೋರಾಡುತ್ತಿದ್ದಾರೆ. ಎಲ್ಲ ಭಾರತೀಯರೂ ಈ ಹೋರಾಟದಲ್ಲಿ ಪಾಲ್ಗೊಳ್ಳಲು ಸಂಕಲ್ಪ ಮಾಡಬೇಕು, ಇತರರೂ ತಮ್ಮೊಡನೆ ಕೈ ಜೋಡಿಸುವಂತೆ ಕೇಳಿಕೊಳ್ಳಬೇಕು. ಭಾರತೀಯರು ಈ ಬಗೆಯಲ್ಲಿ ಸಿದ್ಧರಾದರೆ ಜಗತ್ತಿನ ಯಾವ ಶಕ್ತಿಯೂ ಅವರು ಗುರಿ ಮುಟ್ಟದಂತೆ ತಡೆಯಲಾಗದು. ಬ್ರಿಟಿಷ್ ಆಡಳಿತ ಕೊನೆಗೊಂಡು ಭಾರತೀಯರ ಆಳ್ವಿಕೆ ಬರುವ ತನಕ ಚಳುವಳಿ ಮುಂದುವರಿಯುತ್ತಲೇ ಇರುತ್ತದೆ...'

ಟಿಪ್ಪಣಿ: 9 ಗಂಟೆಯ ನಂತರದ ಸುದ್ದಿ ಅಸ್ಪಷ್ಟವಾಗಿದೆ.

11 ಅಕ್ಟೋಬರ್ 1942. ತರಂಗಾಂತರ: 41.42 ಮೀಟರ್ಸ್. ಭಾಷೆ: ಹಿಂದೂಸ್ತಾನಿ. ಧ್ವನಿ: ಗಂಡು. ಸಮಯ: ರಾತ್ರಿ 8.45–9.05.

'ಯಾರೋ ಕೆಲವರು ಬ್ರಿಟಿಷ್ ಸರ್ಕಾರ ಮತ್ತು ಕಾಂಗ್ರೆಸ್ಸಿನ ನಡುವೆ ರಾಜಿಕಬೂಲಿ ಮಾಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅಂಥ ಯಾವುದೇ ರಾಜಿಕಬೂಲಿಯೂ ನಡೆಯದು. ಗಾಂಧೀಜಿ ಜೈಲು ಸೇರುವ ಮುನ್ನ 'ಇದು ಕೊನೇ ಯುದ್ಧ' ಎಂದು ಸಾರಿ ಹೋಗಿದ್ದಾರೆ; 'ಮಾಡು ಇಲ್ಲವೇ ಮಡಿ' ಎಂದು ಗಾಂಧೀಜಿ ಕರೆ ಕೊಟ್ಟಿದ್ದಾರೆ. ನಿಮ್ಮ ಆಯ್ಕೆ ಯಾವುದು ಎಂಬುದನ್ನು ನೀವೇ ನಿರ್ಧರಿಸಿ.'

ಸುದ್ದಿ ಮುಕ್ತಾಯ: ರಾತ್ರಿ 9.05.

ಟಿಪ್ಪಣಿ: ದನಿ ಸರಿಯಾಗಿ ಕೇಳಿಸುತ್ತಿಲ್ಲ.

12 ಅಕ್ಟೋಬರ್ 1942. ರಾತ್ರಿ: 8.40. ತರಂಗಾಂತರ: 41.42 ಮೀಟರ್ಸ್. ಭಾಷೆ: ಹಿಂದೂಸ್ತಾನಿ. ಧ್ವನಿ: ಗಂಡು.

'ನಾನೀಗ ಕಾಂಗ್ರೆಸ್ ರೇಡಿಯೊದಿಂದ ಮಾತಾಡುತ್ತಿದ್ದೇನೆ. ನಾವೀಗ ಈದ್ ಕಾರ್ಯಕ್ರಮ ನಡೆಸಿಕೊಡಲಿದ್ದೇವೆ. ನಮ್ಮ ಮಹಮ್ಮದೀಯ ಸೋದರರಿಗೆ ಈದ್ ಶುಭಾಶಯಗಳು.

ಇದು ಕಾಂಗ್ರೆಸ್ ರೇಡಿಯೊ. ಜಗತ್ತಿನಲ್ಲಿ ಹಿಂದೆಂದೂ ನಡೆಯದಂಥ ಯುದ್ಧ ಈಗ ನಡೆಯುತ್ತಿದೆ... ಒಂದೆಡೆ ನಲವತ್ತು ಕೋಟಿ ಭಾರತೀಯರನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಬ್ರಿಟಿಷ್ ಆಡಳಿತ ಯುದ್ಧ ನಡೆಸುತ್ತಿದೆ; ಇನ್ನೊಂದೆಡೆ ಶಸ್ತ್ರಾಸ್ತ್ರಗಳಿಲ್ಲದ, ದುರ್ಬಲರಾದ ಜನ ಧೈರ್ಯದಿಂದ ಎದುರಾಳಿಯನ್ನು ಎದುರಿಸುತ್ತಿದ್ದಾರೆ.

ಹಿಂದೂಗಳು, ಮಹಮ್ಮದೀಯರು, ಕ್ರಿಶ್ಚಿಯನ್ನರು, ಪಾರ್ಸಿಗಳು ಎಲ್ಲರೂ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದಾರೆ. ಆದರೆ ಈ ಕಾಲದಲ್ಲಿ ಸುಳ್ಳು ಹೇಳುವುದು ಕಾನೂನುಬದ್ಧವಾಗಿಬಿಟ್ಟಿದೆ! ಉದಾಹರಣೆಗೆ, 'ಈಗ ಭಾರತೀಯರನ್ನು ಭಾರತೀಯರೇ ಆಳುತ್ತಿದ್ದಾರೆ' ಎಂದು ಸುಳ್ಳು ಹೇಳಲಾಗುತ್ತಿದೆ; ಇದಕ್ಕಿಂತ ಇನ್ನೂ ದೊಡ್ಡ ಸುಳ್ಳು ಯಾವುದೆಂದರೆ, 'ಕೆಲವೇ ಮಂದಿ ಮಾತ್ರ ಸ್ವಾತಂತ್ರ್ಯ ಕೇಳುತ್ತಿದ್ದಾರೆ; ಆದರೆ ಒಂಬತ್ತು ಕೋಟಿ ಮಹಮ್ಮದೀಯರು ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದ್ದಾರೆ' ಎನ್ನುವುದು. ಇಂಥ ಸುಳ್ಳನ್ನು ಬ್ರಿಟಿಷರನ್ನು ಬಿಟ್ಟರೆ ಜಗತ್ತಿನಲ್ಲಿ ಬೇರೆ ಯಾರೂ ಹೇಳಲು ಸಾಧ್ಯವಿಲ್ಲ! ಲಕ್ಷಗಟ್ಟಲೆ, ಕೋಟಿಗಟ್ಟಲೆ ಮುಸ್ಲಿಮರು ದೇಶದ ಸ್ವಾತಂತ್ರ್ಯಕ್ಕಾಗಿ ಹೆಗಲಿಗೆ ಹೆಗಲು ಕೊಟ್ಟು ಹೋರಾಡುತ್ತಾ ಬಂದಿದ್ದಾರೆ ಎಂಬುದನ್ನು ಚರಿತ್ರೆ ಸಾರಿ ಸಾರಿ ಹೇಳುತ್ತಿದೆ.'

12 ಅಕ್ಟೋಬರ್ 1942. ತರಂಗಾಂತರ: 41.42 ಮೀಟರ್ಸ್. ಭಾಷೆ: ಇಂಗ್ಲಿಷ್. ಧ್ವನಿ: ಹೆಣ್ಣು. ಸಮಯ: ರಾತ್ರಿ: 9.20–9.40.

... ಅಲಹಾಬಾದ್ ಸುದ್ದಿ: ಚಳುವಳಿಗಾರರ ಮೇಲೆ ಗುಂಡು ಹಾರಿಸುವಂತೆ ಮುಸ್ಲಿಂ ಅಧಿಕಾರಿಗಳನ್ನು ಕೇಳಲಾಯಿತು; ತಮ್ಮ ದೇಶಬಾಂಧವರ ಮೇಲೆ ಗುಂಡು ಹಾರಿಸಲು ಮುಸ್ಲಿಂ ಅಧಿಕಾರಿಗಳು ಒಪ್ಪಲಿಲ್ಲ.

ಮಲಬಾರ್ ಸುದ್ದಿ: ಜಪಾನಿನ ಸಬ್‌ಮೆರೀನ್‌ಗಳು ಪಶ್ಚಿಮ ಕರಾವಳಿ ಹಾಗೂ ಮತ್ತಿತರೆಡೆ ಅಡ್ಡಾಡುತ್ತಿರುವ ಸುದ್ದಿ ಬಂದಿದೆ.

ಬೃಂದಾವನ: ದೇವಾಲಯಗಳಲ್ಲಿ ಪೂಜೆ ಮಾಡುತ್ತಿದ್ದವರನ್ನು ಹೊರಗೆಳೆದು ತಂದು ಅವರ ಆಭರಣಗಳನ್ನು ಕಿತ್ತುಕೊಳ್ಳಲಾಯಿತು. ಸ್ವತಃ ಡಿಸ್ಟ್ರಿಕ್ಟ್ ಕಲೆಕ್ಟರ್ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾನೆ. ಭಕ್ತರನ್ನು ಬಂಧಿಸಿ ಪೊಲೀಸ್ ಲಾಕಪ್ಪಿನಲ್ಲಿ ಹಿಂಸಿಸಲಾಗಿದೆ. ನಾಝಿಗಳು ನಮ್ಮಿಂದ ಹಿಂಸೆಯ ಪಾಠಗಳನ್ನು ಕಲಿಯಬೇಕೆಂದು ಬ್ರಿಟಿಷ್ ಸರ್ಕಾರದ ಪೊಲೀಸರು ತೋರಿಸಿಕೊಡಲು ಹೊರಟಂತಿದೆ.

ಟಿಪ್ಪಣಿ: ಧ್ವನಿ ಅಸ್ಪಷ್ಟವಾಗಿದೆ. ಆಗೀಗ ಪ್ರತಿಧ್ವನಿ ಕೇಳಿಸುತ್ತಿದೆ.

13 ಅಕ್ಟೋಬರ್ 1942. ತರಂಗಾಂತರ: 42.12 ಮೀಟರ್ಸ್. ಭಾಷೆ: ಹಿಂದೂಸ್ತಾನಿ. ಧ್ವನಿ: ಗಂಡು. ಹಾಡು: ಹಿಂದೂಸ್ತಾನ್ ಹಮಾರಾ (ಸಮೂಹ ಗಾಯನದ ಧ್ವನಿಮುದ್ರಿಕೆ)

ಬಿಹಾರದಲ್ಲಿ ಹಲವಾರು ಕಾಂಗ್ರೆಸ್ ನಾಯಕರು ಅರೆಸ್ಟಾಗಿದ್ದಾರೆ...

ಶಂಕರಪುರ ವರದಿ: ಹಲವು ಕಾರ್ಯಕರ್ತರ ಬಂಧನವಾಗಿದೆ. ರಚನಾತ್ಮಕ ಕಾರ್ಯಕ್ರಮಗಳ ಮೇಲೆ ನಿರ್ಬಂಧ ಹೇರಲಾಗಿದೆ. ಚಳುವಳಿಗಾರರನ್ನು ಬಂಧಿಸಲು ಪೊಲೀಸ್ ಅಧಿಕಾರಿಯೊಬ್ಬ ಪೊಲೀಸ್ ತಂಡದೊಂದಿಗೆ ಹಳ್ಳಿಯೊಂದಕ್ಕೆ ಬಂದ; ಆದರೆ ಹಳ್ಳಿಯ ಜನ ಪೊಲೀಸರಿಗೆ ಹೇಗೆ ಮುತ್ತಿಕೊಂಡರೆಂದರೆ ಪೊಲೀಸರು ಕಂಗಾಲಾಗಿ ಯಾರನ್ನೂ ಬಂಧಿಸಲಾಗದೆ ಅಲ್ಲಿಂದ ಹೊರಟರು. ಡಾರ್ಜಿಲಿಂಗ್ ಗೋಲಿಬಾರ್‌ನಲ್ಲಿ ಹಲವರು ಗಾಯಗೊಂಡರು; ಮೂವರು ಮೃತಪಟ್ಟರು.

ಭಾರತೀಯರು ಇಂಥ ಕೃತ್ಯಗಳನ್ನು ಸಹಿಸುವುದಿಲ್ಲ.

ವಿದೇಶಿ ವಸ್ತುಗಳ ಫ್ಯಾಕ್ಟರಿಗಳ ಎದುರು, ಕಚೇರಿಗಳ ಎದುರು ಶಾಂತಿಯುತವಾಗಿ ಪಿಕೆಟಿಂಗ್ ನಡೆಸಿ. ಸರ್ಕಾರಿ ನೌಕರಿ ಬಿಟ್ಟು ಹೊರ ಬನ್ನಿ. ಮನೆಮನೆಗಳಲ್ಲಿ ಚರಕಾ ಇರಲಿ. ಹಳ್ಳಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಿ. ಹಿಂದೂ–ಮುಸ್ಲಿಂ ಸಾಮರಸ್ಯ ಕಾಪಾಡಿ.'

ಈವರೆಗೆ ಹಿಂದೂಸ್ತಾನಿ ಪ್ರಸಾರ ಕೇಳಿದಿರಿ. ಇನ್ನು ಮುಂದೆ ಇಂಗ್ಲಿಷ್ ಸುದ್ದಿ ಪ್ರಸಾರ.

ಸುದ್ದಿ ಮುಕ್ತಾಯ 9.04 ನಿಮಿಷ.

ಟಿಪ್ಪಣಿ: ಪ್ರಸಾರ ಇದ್ದಕ್ಕಿದ್ದಂತೆ ಕೊನೆಗೊಂಡಿತು.

18 ಅಕ್ಟೋಬರ್ 1942. ತರಂಗಾಂತರ 42.12 ಮೀಟರ್ಸ್. ಧ್ವನಿ: ಗಂಡು. ಭಾಷೆ: ಹಿಂದೂಸ್ತಾನಿ. ರಾತ್ರಿ: 7.30–7.55.

ಕಾಂಗ್ರೆಸ್ ರೇಡಿಯೊ ಕಾಲಿಂಗ್. ಇವತ್ತು ವಿಜಯದಶಮಿ... ನಮ್ಮ ಹೋರಾಟ ವಿಜಯ ದೊರೆಯುವವರೆಗೂ ಮುಂದುವರೆಯಲಿದೆ... ಇತ್ತಿತ್ತಲಾಗಿ ದಿನಪತ್ರಿಕೆಗಳು ಸತ್ಯವನ್ನು ಹತ್ತಿಕ್ಕುತ್ತಿವೆ. ಸುಳ್ಳನ್ನು ಹರಡುತ್ತಿವೆ. ಅಂಥ ಪತ್ರಿಕೆಗಳನ್ನು ಓದಬೇಡಿ... ರೈತರು ಕಂದಾಯ ಕೊಡಲು ಒಲ್ಲೆ ಎನ್ನಿ!

ಭಾಷೆ: ಇಂಗ್ಲಿಷ್. ಧ್ವನಿ ಗಂಡು: ಶಾಸಕಾಂಗ ನ್ಯಾಯ ಕೊಡುತ್ತಿಲ್ಲ. ಈಗ ಜನಸಮುದಾಯ ಮಾತ್ರ ಚಳುವಳಿಯನ್ನು ಕೈಗೆತ್ತಿಕೊಳ್ಳಬಲ್ಲದು. ಸರ್ಕಾರಕ್ಕೆ ತೆರಿಗೆ ಕೊಡುವುದನ್ನು ನಿಲ್ಲಿಸಿ.

ವಂದೇ ಮಾತರಂ.

ಟಿಪ್ಪಣಿ: ಧ್ವನಿ ಅಸ್ಪಷ್ಟವಾಗಿದೆ.

18 ಅಕ್ಟೋಬರ್ 1942. ತರಂಗಾಂತರ: 42.12 ಮೀಟರ್ಸ್. ಧ್ವನಿ: ಗಂಡು. ಭಾಷೆ: ಹಿಂದೂಸ್ತಾನಿ. ರಾತ್ರಿ: 8.45–9.10.

ಭಾಗಲ್ಪುರದಲ್ಲಿ ಪೊಲೀಸ್ ತಂಡ 50 ಜನರನ್ನು ಬಂಧಿಸಿತು. ಆದರೆ ಅಲ್ಲಿ 30000 ಜನ ಸೇರಿದ ತಕ್ಷಣ ಹೆದರಿದ ಪೊಲೀಸರು ಸತ್ಯಾಗ್ರಹಿಗಳನ್ನು ಅಲ್ಲೇ ಬಿಟ್ಟು ಜಾಗ ಖಾಲಿ ಮಾಡಿದರು...